**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಚನ್ನಗಿರಿ.</u>**

**ಎಂ ವಿ ಸಿಃ 408/2023 RW-2**

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ |
| ತಂದೆಯ ಹೆಸರು | ಮಹೇಶ್ವರಪ್ಪ |
| ವಯಸ್ಸು | 26 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕೋಟೆಹಾಳು |
| ದಿನಾಂಕ | 05.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎ ಎಂ ವಿ ವಕೀಲರಿಂದಃ</u>**

ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಗೆ ಸಾಕ್ಷಿ ಹೇಳಲು ಬಂದಿರುತ್ತೇನೆ. ಅರ್ಜಿದಾರರು ನನ್ನ ತಾಯಿ ಇರುತ್ತಾರೆ. ಅರ್ಜಿದಾರರು ನನ್ನ ಮತ್ತು ವಿಮೆ ಕಂಪನಿಯ ವಿರುದ್ದ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಈ ಪ್ರಕರಣವನ್ನು ನನ್ನ ತಾಯಿಯು ಸಂಜು ಎನ್ನುವವರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದು ಈ ಪ್ರಕರಣ ದಾಖಲಿಸಿರುತ್ತಾರೆ. ಸಂಜು ನನ್ನ ತಮ್ಮ ಇರುತ್ತಾರೆ. ಮೋಟರ್ ಸೈಕಲ್ ಚಲಾಯಿಸುತ್ತಿದ್ದ ಮಹೇಶ್ವರಪ್ಪ ನನ್ನ ತಂದೆ ಇರುತ್ತಾರೆ. ಮೋಟರ್ ಸೈಕಲ್ ನಂ.ಕೆಎ-17-ಹೆಚ್ ಎಫ್ -4110 ನನ್ನ ತಂದೆಯ ಹೆಸರಿನಲ್ಲಿ ಇತ್ತು. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿ ದಾಖಲೆಗಳನ್ನು ಆರ್ ಟಿ ಓ ಕಚೇರಿಗೆ ಸಲ್ಲಿಸಿ ಅವರ ಹೆಸರಿಗೆ ಅದನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ. ನಾನು ಈ ಪ್ರಕರಣದಲ್ಲಿ ನಮ್ಮ ವಕೀಲರ ಕಡೆಯಿಂದ ಹಾಜರಾಗಿ ವಕಾಲತ್ತು ಹಾಕಿರುತ್ತೇನೆ. ನಾನು ಈ ಪ್ರಕರಣದಲ್ಲಿ ಯಾವುದೇ ತಕರಾರನ್ನು ಸಲ್ಲಿಸಿಲ್ಲ. ನಾನು ಮತ್ತು ಅರ್ಜಿದಾರರು ಒಂದೇ ಮನೆಯಲ್ಲಿ ವಾಸವಿರುತ್ತೇವೆ. ನನಗೆ ಈ ಪ್ರಕರಣದ ಎಲ್ಲಾ ವಿದ್ಯಮಾನಗಳ ಬಗ್ಗೆ ಮಾಹಿತಿ ಇರುತ್ತದೆ. ಹಿಂದೆ ನನ್ನ ತಾಯಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಾಗ ನಾನು ಅವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೆ. ನಾನು ನನ್ನ ತಂದೆಗೆ ಸಂಬಂಧಿಸಿದ ಡಿಎಲ್ ಮತ್ತು ಆರ್ ಸಿ ಪುಸ್ತಕ ಹಾಗೂ ವಿಮೆಯನ್ನು ಹಾಜರುಪಡಿಸಿಲ್ಲ. ನನಗೆ ನ್ಯಾಯಾಲಯದಿಂದ ಸಾಕ್ಷಿ ಸಮನ್ಸ ಬಂದ ನಂತರವು ಸಹ ಆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ.7 ರ ಪ್ರಕಾರ ನನ್ನ ತಾಯಿಯವರು ಪೊಲೀಸ್ ಠಾಣೆಯಲ್ಲಿ ಇಂಡೆಮಿನಿಟಿ ಬಾಂಡ್ ಕೊಟ್ಟು ವಾಹನ ಬಿಡಿಸಿಕೊಂಡಿರುತ್ತಾರೆ. ಮೋಟರ್ ಸೈಕಲ್ ಬಿಡಿಸಿಕೊಂಡು ಬಂದ ನಂತರ ನನ್ನ ತಾಯಿ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ನನ್ನ ತಂದೆಯ ಡಿಎಲ್ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ಅದನ್ನು ಹಾಜರುಪಡಿಸಲು ಆಗುವುದಿಲ್ಲ.

ಸದರಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ 2 ನೇ ಎದುರುದಾರರ ಪರ ವಕೀಲರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.

**ಎಂ ವಿ ಸಿಃ 408/2023**
**RW-2**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ ಎಂ ವಿ ವಕೀಲರಿಂದಃ</u>**

ನನ್ನ ತಂದೆಗೆ ಯಾವುದೇ ಚಾಲನಾ ಪರವಾನಗಿ ಪತ್ರ ಇಲ್ಲದೇ ಇದ್ದರು ಸಹ ಎಲ್ಲಿಯೋ ಇಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ವಿಮಾ ಕಂಪನಿಯಿಂದ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ಶಾಮೀಲಾಗಿ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**